# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 03.03.2019 ರಂದು ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ 7ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎಂ.ಎಸ್. ರಮಾನಂದ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್,**<br>ನಿರ್ದೇಶಕರು – ಐ.ಟಿ. | **ಡಾ. ಸೆಲ್ವಪಿಳ್ಳೆ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

3/3
ಕುಲಸಚಿವರು

ಕುಲಪತಿಗಳು
3/3

**ವಿಷಯ ಸಂಖ್ಯೆ : 07:01**

**ವಿಷಯ :** Ph.D Fee Ordinance - 2019 ನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದಿಸುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಲ್ಲಿ Ph.D ಕೋರ್ಸ್‌ನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಸಂಬಂದ Ordinance ನ್ನು ಶೈಕ್ಷಣಿಕ ಮಂಡಳಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಅದರಂತೆ ಸದರಿ ಕೋರ್ಸ್‌ಗೆ Fee Ordinance ನ್ನು ಸಿದ್ಧಪಡಿಸಿದ್ದು, ಇದನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿದೆ.

Ph.D Fee ವಿವಿಧ ಹಂತಗಳಲ್ಲಿ ನಿಗದಿಪಡಿಸಲು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಡೀನ್(ಶೈ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ದಿನಾಂಕ: 28-02-2019 ಮತ್ತು 02-03-2019 ರಂದು ಸಭೆ ಸೇರಿ ವಿವಿಧ ವಿಶ್ವವಿದ್ಯಾನಿಲಯಗಳ Ph.D Fee ನ Comparetive Statement ನ್ನು ಪರಾಮರ್ಶಿಸಿ ಕರಾಮುವಿ Ph.D ಶುಲ್ಕವು ಸಾಮಾನ್ಯ ಜನರು ವ್ಯಾಸಂಗ ಮಾಡಲು ಅನುಕೂಲವಾಗುವ ರೀತಿಯಲ್ಲಿ ನಿಗಧಿ ಪಡಿಸಿ ಶಿಪಾರಸ್ಸು ಮಾಡಿದೆ. ( ನಡಾವಳಿ ಲಗತ್ತಿಸಿದೆ.)

ಸದರಿ ಶಿಪಾರಸ್ಸನ್ನು ಪರಿಗಣಿಸಿ Ph.D Fee Ordinance ನ್ನು ಸಿದ್ಧಪಡಿಸಿದ್ದು, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ ಮತ್ತು ಅನುಮೋದನೆ ಕೋರಿದೆ.

**ತೀರ್ಮಾನ :** Ph.D Fee Ordinance - 2019 ನ್ನು ಅನುಮೋದಿಸಲಾಯಿತು.

------

**ವಿಷಯ ಸಂಖ್ಯೆ** : 07:02

**ವಿಷಯ :** ಪಿಹೆಚ್.ಡಿ ವಿವರಣಾ ಪುಸ್ತಕ ಅನುಮೋದಿಸುವ ಬಗ್ಗೆ

*****

ಕರಾಮುವಿಯಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಪಿ.ಹೆಚ್.ಡಿ ಕಾರ್ಯಕ್ರಮದ ವಿವರಣಾ ಪುಸ್ತಕವನ್ನು ಯುಜಿಸಿ ಪಿ.ಹೆಚ್.ಡಿ ನಿಯಮಾವಳಿ 2016 ಮತ್ತು ಕರಾಮುವಿ ಪಿ.ಹೆಚ್.ಡಿ ಅಧ್ಯಾದೇಶ 2018 ರ ಪ್ರಕಾರ ಸಿದ್ಧಪಡಿಸಿದ್ದು ಅನುಮೋದನೆಗೆ ಮಂಡಿಸಿದೆ. ದಿನಾಂಕ 14.09.2018 ರಂದು ಯುಜಿಸಿಯು ತನ್ನ ಸಾರ್ವಜನಿಕ ತಿಳುವಳಿಕೆ ಪತ್ರದಲ್ಲಿ IGNOU ಮತ್ತು ತನ್ನಿಂದ ಗುರುತಿಸಲ್ಪಟ್ಟ ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯಗಳು ಪಿ.ಹೆಚ್.ಡಿ ಕಾರ್ಯಕ್ರಮವನ್ನು ಯಾವುದೇ ಪೂರ್ವಾನುಮತಿಯಿಲ್ಲದೆ Regular Mode ಮಾತ್ರವೆ ನಡೆಸಬಹುದು ಎಂಬುದನ್ನು ತಿಳಿಸಿರುತ್ತದೆ. ಆದರಂತೆ ಕರಾಮುವಿಯು ಅರ್ಹ ವಿಭಾಗಗಳನ್ನು ಗುರುತಿಸಿ ಅಲ್ಲಿ ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ ಮಾರ್ಗದರ್ಶಕರಾಗಲು ಅರ್ಜಿಯನ್ನು ಅಹ್ವಾನಿಸಿ ಅದನ್ನು ಅಯಾ ವಿಭಾಗದ ಪಿಜಿ ಅಧ್ಯಯನ ಮಂಡಳಿಯಲ್ಲಿ ಅನುಮೋದಿಸಲಾಗಿದೆ. ಈ ಹಿನ್ನಲೆಯಲ್ಲಿ ವಿವರಣಾ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

**ತೀರ್ಮಾನ :** ಪಿಹೆಚ್.ಡಿ ವಿವರಣಾ ಪುಸ್ತಕ – 2019ನ್ನು ಅನುಮೋದಿಸಲಾಯಿತು.

------

3/3

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

3/3

**ಕುಲಪತಿಗಳು ಹಾಗೂ ಅಧ್ಯಕ್ಷರು**